**ಎಫ್.ಡಿ.ಪಿ 30/2015** **ಆರ್.ಡಬ್ಲೂಃ 1**

ಸಾಕ್ಷಿಯನ್ನು ದಿಃ **15.11.2022** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಆರ್.ಎಲ್.ವಕೀಲ**ರಿಂದ**

ವಿಲ್ ಮಾಡುವ ಸಂಬಂಧ ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋಗಿದ್ದೆವು ಎಂದು ಹೇಳಿದ್ದು, ನನ್ನನ್ನು ಸಬ್ ರಿಜಿಸ್ಟ್ರಾರ್ ರವರು ತಮ್ಮ ಚೆಂಬರ್ ಗೆ ಕರೆದಿದ್ದರು. ಆ ರೀತ್ಯಾ ನಾನು ಅವರ ಚೆಂಬರ್ ಗೆ ಹೋಗಿದ್ದೆ. ಆದರೆ ಅವರು ನನ್ನನ್ನು ಏನು ಕೇಳಲಿಲ್ಲ ಮತ್ತು ಏನು ಹೇಳಲಿಲ್ಲ. ನನ್ನ ಅಜ್ಜಿ ಮತ್ತು ಮಾವ ಕಂಪ್ಯೂಟರ್ ನಲ್ಲಿ ಟೈಪ್ ಮಾಡುವವರ ಬಳಿ ಹೋಗಿದ್ದರು. ವಿಲ್ ಗೆ ನನ್ನ ಅಜ್ಜಿ ಪುಟ್ಟಮ್ಮ ಮತ್ತು ನನ್ನ ಮಾವ ಪರಮೇಶಗೌಡರ ರವರು ಹೆಬ್ಬಟ್ಟು ಹಾಕಿದ್ದರು. ಇದನ್ನು ಹೊರತು ಪಡಿಸಿ ಬೇರೆ ಇನ್ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನುಡಿಯುತ್ತಾರೆ ಆರ್. ಡಬ್ಲ್ಯೂ 2 ಮತ್ತು ಇನ್ನೊಬ್ಬ ಸಾಕ್ಷಿದಾರರಾದ ಚಲುವಯ್ಯ ನವರು ಸಹಿ ವಿಲ್ ಗೆ ಮಾಡಿದ್ದಾರೆ. ಸದರಿ ವಿಲ್ ಗೆ ಯಾರ್ಯಾರು ಎಷ್ಟೆಷ್ಟು ಸಹಿ ಮಾಡಿದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ. ವಿಲ್ ಮಾಡಿಕೊಟ್ಟಿದ್ದಾರೆ ಎನ್ನಲಾದ ನನ್ನ ಮಾವ ಪರಮೇಶ್ ಗೌಡರವರು ಬದುಕಿದ್ದಾರೆ. ಪ್ರಾಪಂಚಿಕ ಜ್ಞಾನ ಇರದಿದ್ದ ನನ್ನ ಅಜ್ಜಿ ಮತ್ತು ಮಾತುಬಾರದ ನನ್ನ ಮಾವನ ಪರಿಸ್ಥಿತಿಗಳನ್ನು ದುರುಪಯೋಗಪಡಿಸಿಕೊಂಡು ನಿಆರ್.1 ರ ವಿಲ್ ಅನ್ನು ಸೃಷ್ಟಿಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜಿಗೆ ಓದು ಬರಹ ಬರುವುದಿಲ್ಲ ಎಂದರೆ ಸರಿ. ಅದೆ ರೀತಿ ನನ್ನ ಮಾವನಿಗೂ ಓದು ಬರಹ ಬರುವುದಿಲ್ಲ ಎಂದರೆ ಸರಿ. ನನ್ನ ಅಜ್ಜಿಗೆ ಮತ್ತು ನನ್ನ ಮಾವನಿಗೆ ಇಂತಿಂತಹ ಜಾಗದಲ್ಲಿ ಇಂತಿಂತಹ ವಿಸ್ತೀರ್ಣದ ಜಮೀನು ಭಾಗದಲ್ಲಿ ಬಂದಿದೆ ಎಂದು ತೋರಿಸಲು ಯಾವುದೆ ದಾಖಲೆ ಇಲ್ಲ ಎಂದರೆ ಅದು ನನ್ನ ಅಜ್ಜಿಗೆ ಗೊತ್ತಿತ್ತು ಎನ್ನುತ್ತಾರೆ. ನನ್ನ ಅಜ್ಜಿ ಮತ್ತು ಮಾವನಿಗೆ 1/6 ಭಾಗ ಯಾವ ಯಾವ ಸರ್ವೆ ನಂ. ನಲ್ಲಿ ಮತ್ತು ಎಷ್ಟೆಷ್ಟು ಜಮೀನು ಯಾವ ಯಾವ ದಿಕ್ಕಿನಲ್ಲಿ ಬಂದಿದೆ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ಅಜ್ಜಿಗಾಗಲಿ ಅಥವಾ ಮಾವನಿಗಾಗಲಿ ಅವರಿಗೆ ನೀಡಿದ್ದಾರೆ ಎನ್ನಲಾದಂತಹ 1/6 ನೇ ಭಾಗದ ಜಮೀನು ಯಾವ ಸರ್ವೆ ನಂ. ನಲ್ಲಿ ಎಷ್ಟೆಷ್ಟು ವಿಸ್ತೀರ್ಣ ಬಂದಿದೆ ಎಂದು ಇಲ್ಲಿಯವರೆಗೂ ಯಾವುದೆ ಆದೇಶ ಆಗಿಲ್ಲ ಎಂದರೆ ಸರಿಯಲ್ಲ. ಈ ರೀತಿ ಆದೇಶ ಆಗಿರುವ ದಾಖಲೆ

ನಾನು ನೋಡಿದ್ದೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲು ನನಗೇನು ತೊಂದರೆ ಇಲ್ಲ. ಪ್ರಸ್ತುತ ಪ್ರಕರಣವನ್ನು ಯಾರು, ಯಾರ ವಿರುದ್ಧ ಮತ್ತು ಯಾವ ಪರಿಹಾರ ಕೋರಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾವ ಯಾವ ಪಕ್ಷಗಾರರಿಗೆ ಎಷ್ಟು ವಿಸ್ತೀರ್ಣದ ಮತ್ತು ಯಾವ ಯಾವ ಜಾಗದಲ್ಲಿ ಭಾಗ ಕೊಟ್ಟಿದ್ದಾರೆ ಎಂದು ಈ ಅರ್ಜಿಯನ್ನು ಇನ್ನೂ ತೀರ್ಮಾನ ಆಗಿಲ್ಲ ಎಂದರೆ ಸರಿ.

ನಿಆರ್. 1 ವಿಲ್ ನನ್ನ ಸ್ವಾಧೀನದಲ್ಲೆ ಇತ್ತು. ನನ್ನ ಅಜ್ಜಿ ಮತ್ತು ಮಾವನಿಗೆ ನಿಆರ್. 1 ರ ವಿಲ್ ಬರೆಯುವ ಉದ್ದೇಶ ಇರಲಿಲ್ಲ ಅವರು ಅಂತಹ ಯಾವುದೆ ವಿಲ್ ಬರೆದಿಲ್ಲ ನಾನೆ ನಿಆರ್. 1 ಅನ್ನು ನನ್ನ ಅಜ್ಜಿ ಮತ್ತು ಮಾವನಿಗೆ ಗೊತ್ತಿಲ್ಲದಂತೆ  ಸೃಷ್ಟಿಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಮತ್ತು ಮಾವನ ಭಾಗದ ಸ್ವತ್ತುಗಳನ್ನು ನಾನು ಲಪಟಾಯಿಸುವ ಉದ್ದೇಶದಿಂದ ಅವರು ವಿಲ್ ಮಾಡುವ ಯಾವುದೆ ಇರಾದೆ ಹೊಂದಿಲ್ಲದೆ  ಇದ್ದರು  ನಾನು, ಸಾಕ್ಷಿದಾರರು ಮತ್ತು ಸಬ್ ರಿಜಿಸ್ಟ್ರಾರ್ ರವರು ಸೇರಿ ನಿಆರ್. 1 ದಾಖಲೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ವಿಲ್ ಅನ್ನು ಸೃಷ್ಟಿ ಮಾಡಿ ಇಲ್ಲಿ ಹಾಜರು ಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವ ಪರಮೇಶ್ ಗೌಡರಿಗೆ ಮಾತು ಬರುತ್ತಿರಲಿಲ್ಲವಾದ ಕಾರಣ ಅವರು ಸನ್ನೆ ಮೂಲಕ ಹೇಳಿದ್ದನ್ನು ಅನುವಾದಿಸಿ ಹೇಳುವವರನ್ನು ಸಬ್ ರಿಜಿಸ್ಟ್ರಾರ್ ರವರು ಆ ದಿನ ನೇಮಕ ಮಾಡಿಕೊಂಡಿರಲಿಲ್ಲ.  ನನ್ನ ಮಾವ ಪರಮೇಶ್ ಗೌಡರವರಾಗಲಿ ಅಥವಾ ನನ್ನ ಅಜ್ಜಿಗಾಗಲಿ ವಿಲ್ ಮಾಡುವ ಉದ್ದೇಶ ಇರಲಿಲ್ಲ ನಾನು ವಿಲ್ ಅನ್ನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದಲೆ ಯಾವುದೆ ಅನುವಾದಕರನ್ನು ಕೂಡ ನೇಮಕ ಮಾಡಿರಲಿಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.